

‘ಮಕ್ಕಳು ಚಿಕ್ಕವರಾಗಿದ್ದಾಗ ಹೇಗೆಲ್ಲಾ ಇದ್ದರು’ ಎಂಬಂಥ ಕಥೆಗಳನ್ನು ಹಂಚಿಕೊಳ್ಳುವಾಗ, ಅಮ್ಮನ ಮುಖ ಅರಳಿರುತ್ತದೆ. ಅಪ್ಪನ ಮುಖದಲ್ಲಿ ಗೆಲುವು ತುಂಬಿರುತ್ತದೆ.

# ಮಕ್ಕಳ ಕೆಲಸವೆಂದರೆ ಅಪ್ಪ ಅಮ್ಮಂಗೆ ಇಷ್ಟ

■ ಸ್ವಯಂಪ್ರಭಾ

ಈ ಕೊರೊನಾ ಕಾಲದಲ್ಲಿ ನಾವು ಈವರೆಗೆ ಅಷ್ಟೇನೂ ಗಮನ ಕೊಡದಿದ್ದ ಎಷ್ಟೆಲ್ಲ ವಿಷಯಗಳು ಮುನ್ನೆಲೆಗೆ ಬಂದಿವೆ. ಕುದುರೆಯ ಕಂಗಳಿಗೆ ಕಣ್ಕಾಪು ಕಟ್ಟಿ ಓಡಿಸಿದಂತೆ ನಾವೂ ಬದುಕನ್ನು ಓಡಿಸುತ್ತಲೇ ಇದ್ದೆವು. ಆದರೆ, ಕೊರೊನಾ ಸೋಂಕಿನ ಪ್ರವೇಶದಿಂದ ಜಗತ್ತಿನ ಓಟ ನಿಧಾನವಾಗಿದೆ. ಈ ಹಠಾತ್ ವಿಳಂಬಗತಿಯು ಮತ್ತೇನೇನೋ ವಿಚಾರಗಳನ್ನು ಗಮನಿಸಲು ಅನುವು ಮಾಡಿಕೊಟ್ಟಿದೆ. ಅದರಲ್ಲಿಯೂ ಮನೆಯೊಳಗೆ, ಮಕ್ಕಳ ಬಗ್ಗೆ ನಮ್ಮ ದೃಷ್ಟಿಕೋನ ಧೋರಣೆಗಳು ಹೇಗೆಲ್ಲಾ ರೂಪು ಪಡೆದಿವೆ ಎಂಬುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಅರಿವಾದೀತು.

ಒಂದರಿಂದ ಒಂಬತ್ತನೇ ತರಗತಿಗಳ ವಿದ್ಯಾರ್ಥಿಗಳಿಗೀಗ ರಜೆ. ಮಕ್ಕಳೆಲ್ಲ ಮನೆಯಲ್ಲಿಯೇ ಝಂಡಾ ಹೂಡಿದ್ದಾರೆ. ಶಿಕ್ಷಣದ ಹೊಸ ವಿಧಾನಗಳಿಂದಾಗಿ, ತಬ್ಬಿಬ್ಬಾಗಿರುವ ಅವರು ಪರೀಕ್ಷೆಗಳು ಮತ್ತು ಬಿಸಿಲನ್ನು ತಮಗೆ ತೋಚಿದಂತೆ ಎದುರಿಸುತ್ತಿದ್ದಾರೆ.

ರಜೆಯಿಂದಾಗಿ ನೀಲಿಮಾಳಿಗೆ ಇತ್ತೀಚೆಗೆ ಒಂದು ವಿಚಾರ ಗೊತ್ತಾಗಿದೆ. ಶಾಲೆಗೆ ಹೋಗುವ ತನ್ನ ಇಬ್ಬರು ಮಕ್ಕಳಿಗಾಗಿ ದಿನದ ಎಲ್ಲ ಸಮಯವನ್ನು ಮೀಸಲಿಡುವವಳು ಆಕೆ. ಮಗನಿಗೆ ಕೆಲವೊಮ್ಮೆ, ‘ಒಂಚೂರೂ ನೀಟಾಗಿ ಇರಲು ಬರುವುದಿಲ್ಲ. ಮಾಸ್ಕ್ ಎಲ್ಲೆಂದರಲ್ಲಿ ಹಾಕಿದ್ದಿ, ಈ ಲಂಚ್ ಬಾಕ್ಸ್ ಬ್ಯಾಗೊಳಗೇ ಮರೆತೆಯಲ್ಲಾ... ಎಲ್ಲಾ ನಾನೇ ನೋಡಿ ಎತ್ತಿಡಬೇಕೇನು? ಹೈಸ್ಕೂಲಿಗೆ ಬಂದರೂ ಇದೆಲ್ಲಾ ಗೊತ್ತಾಗುವುದಿಲ್ಲ ಅಂದ್ರೆ, ನಾವು ಮನೆಯಲ್ಲಿ ಇಷ್ಟು ಬುದ್ಧಿ ಹೇಳಿ ಏನು ಪ್ರಯೋಜನ?’ ಎಂದು ದಬಾಯಿಸುತ್ತಾಳೆ. ಈ ಬೈಗುಳವೆಲ್ಲ ಪ್ರೀತಿಯ ಮತ್ತೊಂದು ಮುಖ ಎಂದು ಮಗನಿಗೂ ಗೊತ್ತಿದೆ.

ಮಗರಾಯ ಓದಲು ಪುಸ್ತಕ ಬಿಡಿಸಿದನೆಂದರೆ ಸಾಕು, ಅವನಿಗೆ ಬೇಕು ಬೇಕಾದ್ದನ್ನು ಒದಗಿಸಲು ನೀಲಿಮಾ ಟೊಂಕ ಕಟ್ಟಿ ನಿಲ್ಲುತ್ತಾಳೆ. ಎಷ್ಟರಮಟ್ಟಿಗೆ ಎಂದರೆ, ಅವನು ಜೀವಶಾಸ್ತ್ರದ ರೆಕಾರ್ಡ್‌ನಲ್ಲಿ ಚಿತ್ರ ಬಿಡಿಸುತ್ತಿದ್ದಾನೆ ಎಂಬುದು ಗೊತ್ತಾದರೆ ಸರಿ, ಪೆನ್ ಸ್ಟ್ಯಾಂಡ್‌ನಿಂದ ಮತ್ತೊಂದು ಪೆನ್ಸಿಲ್ ಚೂಪು ಮಾಡಿ, ಮತ್ತೊಂದು ರಬ್ಬರನ್ನು ಸ್ವಚ್ಛ ಮಾಡಿ ಸಿದ್ಧವಾಗಿ ಇಡುತ್ತಾಳೆ. ಪೆನ್ಸಿಲ್ ಮುರಿಯಿತೆಂದೋ, ರಬ್ಬರ್ ಕೆಳಗೆ ಬಿತ್ತೆಂದೋ ನೆಪ ಮಾಡಿ ಅವನು ತನ್ನ ಏಕಾಗ್ರತೆಯನ್ನು ಭಂಗಗೊಳಿಸಿಕೊಳ್ಳುವುದು ಬೇಡ ಎಂಬ ಉದ್ದೇಶ ಅವಳದು. ಓದಲು ಇರುವ ಕಡಿಮೆ ಅವಧಿಯಲ್ಲಿ ಅವನು ಏಕಾಗ್ರತೆಯಿಂದ ತುಸುವೇ ಹೊತ್ತು ಓದಲು ಕುಳಿತುಕೊಳ್ಳುವುದು ಎಂದು ಆಕೆಗೆ ಗೊತ್ತಿದೆ. ಹಾಗಾಗಿ, ಅವ ಓದುವ, ಬರೆಯುವ ಉತ್ಸಾಹ ತೋರಿದರೆ, ಅವಳು ಟೀವಿ ಆಫ್ ಮಾಡಿಬಿಡುವವಳು. ಮನೆಯಲ್ಲಿ ಪತಿ, ಏನಾದರೂ ‘ಬಿಗ್ ಬಾಸ್’ನಲ್ಲಿ ಪ್ರಶಾಂತ್ ಸಂಬರಗಿ ಯಾಕೆ ಇಷ್ಟು ಸಿಟ್ಟು ಮಾಡ್ಕೋತಾರೋಪ್ಪಾ’ ಎಂದು ಲೋಕಾಭಿರಾಮ ಮಾತು ತೆಗೆದರೆ, ‘ಶ್ ಶ್... ಅವನೂ ಮಾತಿಗೆ ಬಂದುಬಿಡುತ್ತಾನೆ. ಸುಮ್ಮನಿರಿ. ಓದಲಿ’ ಎಂದು ಕಣ್ಸನ್ನೆ ಕೈಸನ್ನೆಗಳಲ್ಲಿಯೇ ಪತಿಗೆ ಹೇಳುತ್ತಾಳೆ. ಅವನಿಷ್ಟದ ‘ಕಿರಿಕ್ ಪಾರ್ಟಿ’ ಸಿನಿಮಾ ಯಾವುದಾದರೂ ಚಾನೆಲ್‌ನಲ್ಲಿ ಕಾಣಿಸಿಕೊಂಡರೆ, ಅದನ್ನು ಬದಲಿಸಿ, ಟಿಟಿಡಿ ಚಾನೆಲ್‌ನಲ್ಲಿ ಬರುವ ದೇವರನಾಮವನ್ನು ಸಣ್ಣ ದನಿಯಲ್ಲಿ ಹಾಕಿ, ಅದರೊಳಗೆ ಮನಸ್ಸು ನೆಟ್ಟಂತೆ ನಟನೆ ಮಾಡುತ್ತಾಳೆ. ಇಂತಿಪ್ಪ ನೀಲಿಮಾಳಿಗೆ, ಈಗ ಅಷ್ಟೇನೂ ಕೆಲಸವೇ ಇಲ್ಲವಾಗಿದೆ. ಪರೀಕ್ಷೆಗಳ ಗಂಭೀರತೆ ಹೊರಟು ಹೋಗಿದೆ. ಶಾಲೆಗೆ ಮಕ್ಕಳನ್ನು ಸಿದ್ಧ ಮಾಡುವ ಧಾವಂತ ಇಲ್ಲವಾಗಿದೆ. ಬೆಳಿಗ್ಗೆ ಬೇಗನೇ ಏಳುವ ಅಗತ್ಯವೇ ಇಲ್ಲವೆನ್ನಿಸಿ, ಮನಸ್ಸಿಗೆ ಪಿಚ್ಚೆನಿಸಿಬಿಟ್ಟಿದೆ.

ಆಗಲೇ ಅವಳಿಗೆ ಅನಿಸಿದ್ದು, ಮಕ್ಕಳ ಕೈಲಾಗಲ್ಲ ಎಂಬ ಭ್ರಮೆಯಲ್ಲಿ ನಾವು ಪಾಲಕರು ಅವರಿಗೆ ಏನೆಲ್ಲ ಸಹಾಯವನ್ನು ಮಾಡುತ್ತೇವೆ. ಸಿದ್ಧತೆಗಳನ್ನು ಮಾಡಿಕೊಡುವುದರಲ್ಲೇ ನಮ್ಮನ್ನು ತೊಡಗಿಸಿಕೊಳ್ಳುತ್ತೇವೆ. ಆದರೆ ವಾಸ್ತವದಲ್ಲಿ ಅವರಿಗೆ ಅವುಗಳ ಅಗತ್ಯವಿದೆಯೋ ಇಲ್ಲವೋ ಗೊತ್ತಿಲ್ಲ. ನಮ್ಮ ಮಖುಷಿಗಾಗಿ ಅಂತಹ ಕೆಲಸಗಳನ್ನು ನಾವು ಹುಡುಕಿ ಹುಡುಕಿ ಮಾಡುತ್ತಿರುತ್ತೇವೆ. ಈ ಜಗತ್ತಿನಲ್ಲಿ ನಿಷ್ಕಲ್ಮಷವಾದ ಪ್ರೀತಿ ಎಂಬುದು ಇದ್ದರೆ ಅದು ತಾಯಿ, ಮಗು ಅಥವಾ ತಂದೆ ಮಗುವಿನದ್ದು ಅಲ್ಲವೇ. ಆದ್ದರಿಂದಲೇ ಮಕ್ಕಳಿಗಾಗಿ ಮಾಡುವ ಪ್ರತಿಯೊಂದು ಕೆಲಸದಲ್ಲಿಯೂ ಸಂತೃಪ್ತಿಯ ಅಂಶವೊಂದು ಇರುತ್ತದೆ. ನಿನ್ನೆ ಮಗ ಮಾಡಿದ ತಪ್ಪು ಇಂದು ನೆನಪೇ ಇರುವುದಿಲ್ಲ. ಇಂದು ಮತ್ತೆ ಅವನಿಗಾಗಿ ಎಲ್ಲವನ್ನೂ ಮಾಡಿಕೊಡಲು ಮನಸ್ಸು ಸಿದ್ಧವಾಗುತ್ತದೆಯಲ್ಲ ಎಂದು ನಿಲೀಮಾ ಈಗೀಗ ಯೋಚಿಸುತ್ತಾಳೆ.

ಮಕ್ಕಳು ಚಿಕ್ಕವರಾಗಿದ್ದಷ್ಟೂ ನಿರೀಕ್ಷೆಯ ಭಾವವೂ ಕಡಿಮೆಯಾಗಿಯೇ ಇರುತ್ತದೆ. ಅದಕ್ಕೇ ಹೇಳುವುದು, ಅಪ್ಪ–ಅಮ್ಮನ ಋಣವನ್ನು ಮಕ್ಕಳು ತಮ್ಮ ಐದು ವರ್ಷದೊಳಗಿನ ಬಾಲ್ಯದಲ್ಲಿ ಸಂದಾಯ ಮಾಡಿಬಿಟ್ಟಿರುತ್ತಾರೆ. ಒಂದೆಡೆ ಬಾಲ್ಯದ ಆಟಪಾಠಗಳ ಸಂತೋಷವನ್ನು ಕೊಟ್ಟರೆ, ಮತ್ತೊಂದೆಡೆ ತಂದೆ ತಾಯಿಯ ಜೀವನದ ಅಷ್ಟು ವರ್ಷಗಳನ್ನು ಅವರು ಬಹಳ ಶ್ರೀಮಂತಗೊಳಿಸುತ್ತಾರೆ. ಬೇಕಿದ್ದರೆ ನೋಡಿ, ಮಕ್ಕಳು ಚಿಕ್ಕವರಾಗಿದ್ದಾಗ ಹೇಗಿದ್ದರು ಎಂಬ ಕಥೆಗಳನ್ನು ಹಂಚಿಕೊಳ್ಳುವಾಗ, ಅಮ್ಮನ ಮುಖ ಹೇಗೆ ಅರಳಿರುತ್ತದೆ? ಅಪ್ಪನ ಮುಖದಲ್ಲಿ ಎಷ್ಟೊಂದು ಗೆಲುವು ತುಂಬಿ ಬಿಡುತ್ತದೆ!

ಪ್ರತಿಕ್ರಿಯಿಸಿ: feedback@sudha.co.in